# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕಿನ ಉಳಾಯಿಬೆಟ್ಟು ಮತ್ತು ಇತರೆ 14 ಹಳ್ಳಿಗಳಿಗೆ (132 ಜನವಸತಿಗಳಿಗೆ) DBOT ಆಧಾರಿತ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ಜಲ ಜೀವನ್ ಮಿಷನ್ ಕಾರ್ಯಕ್ರಮದಡಿ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**
1. ದಿನಾಂಕ:10.03.2021ರ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿ ನಡವಳಿಗಳು.
2. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರವರ ಇ-ಆಫೀಸ್ ಕಡತ ಸಂ:RDWSD-TECHOCN/30/2021

---

**ಪೀಠಿಕೆ:**

ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕಿನ ಉಳಾಯಿಬೆಟ್ಟು ಮತ್ತು ಇತರೆ 14 ಹಳ್ಳಿಗಳಿಗೆ (132 ಜನವಸತಿಗಳಿಗೆ) ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು **ರೂ.73.10ಕೋಟಿ** ಅಂದಾಜಿನ DBOT ಆಧಾರಿತ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ PSRಗೆ ದಿನಾಂಕ:10.03.2021ರ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿ ತಾತ್ವಿಕ ಅನುಮೋದನೆ ನೀಡಲಾಗಿದೆ. ನೇತ್ರಾವತಿ ನದಿಯನ್ನು ಜಲಮೂಲವನ್ನಾಗಿ ಪರಿಗಣಿಸಿದ್ದು, 55 LPCDಯಂತೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ಅನುವಾಗುವಂತೆ ಈ ಯೋಜನೆಯನ್ನು ತಯಾರಿಸಲಾಗಿದೆ. ಕೇಂದ್ರ ಪುರಸ್ಕೃತ ಜಲ ಜೀವನ್ ಮಿಷನ್ ಕಾರ್ಯಕ್ರಮದಡಿ ಕೇಂದ್ರ ಮತ್ತು ರಾಜ್ಯ ವಲಯಗಳಡಿ ವೆಚ್ಚವನ್ನು ಭರಿಸಲು ನಿರ್ಣಯಿಸಲಾಗಿದೆ.

ಉದ್ದೇಶಿತ ಯೋಜನೆಗೆ ಮಂಗಳೂರು ಮಹಾನಗರ ಪಾಲಿಕೆರವರು ರೂಪಿಸಿರುವ ಯೋಜನೆಯಿಂದ 6.34 MLD ಶುದ್ಧ ಕುಡಿಯುವ ನೀರನ್ನು ಪಡೆದು, ಪ್ರತಿ ಕಿಲೋ ಲೀಟರ್‌ಗೆ ರೂ.7.00ರಂತೆ ದರವನ್ನು ಮಂಗಳೂರು ಮಹಾನಗರ ಪಾಲಿಕೆಗೆ ನೀಡಲು ಪರಿಗಣಿಸಲಾಗಿರುತ್ತದೆ.

ಚಾಲ್ತಿ ಪಾರದರ್ಶಕ ನಿಯಮಾನುಸಾರ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಾಗೂ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಜಲ ಜೀವನ್ ಮಿಷನ್ ಕಾರ್ಯಕ್ರಮದಡಿ ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಕುನೀ&ನೈಇ 346 ಗ್ರಾನೀಸ(4)2021 ಬೆಂಗಳೂರು, ದಿನಾಂಕ:22.12.2021.** 1074

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕಿನ ಉಳಾಯಿಬೆಟ್ಟು ಮತ್ತು ಇತರೆ 14 ಹಳ್ಳಿಗಳಿಗೆ (132 ಜನವಸತಿಗಳಿಗೆ) DBOT ಆಧಾರದ ಮೇಲೆ ಶಾಶ್ವತ ಹಾಗೂ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು **ರೂ.7310.00ಲಕ್ಷ (ಏಳು ಸಾವಿರದ ಮುನ್ನೂರ ಹತ್ತು ಲಕ್ಷ ರೂಪಾಯಿಗಳು ಮಾತ್ರ)** ಗಳ ಅಂದಾಜಿನಲ್ಲಿ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಬಾಬ್ತು ಸೇರಿದಂತೆ ಕೇಂದ್ರ ಪುರಸ್ಕೃತ ಜಲ ಜೀವನ್ ಮಿಷನ್ ಕಾರ್ಯಕ್ರಮದಡಿ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

**2. ಈ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

ಅ) ಈ ಅನುಮೋದಿತ ಕುಡಿಯುವ ನೀರಿನ ಯೋಜನೆಯ ವ್ಯಾಪ್ತಿಗೆ ಬರುವ ಹಳ್ಳಿ / ಜನವಸತಿಗಳು ಮತ್ತ್ಯಾವುದೇ ಯೋಜನೆಗಳಡಿ ಸೇರ್ಪಡೆಯಾಗಿರಬಾರದು.

ಆ) ಈ ಯೋಜನೆಯ **DBOT** ಟೆಂಡರ್‌ನ್ನು KTPP ಪಾರದರ್ಶಕ ನಿಯಮಗಳನ್ನು ಅನುಸರಿಸಿ ಅದರಂತೆ ಕ್ರಮವಹಿಸತಕ್ಕದ್ದು.

ಇ) ಟೆಂಡರ್ ಅವಾರ್ಡ್ ಮಾಡುವ ಮೊದಲು ಅಗತ್ಯವಿರುವ ಅನುದಾನವನ್ನು ಲಭ್ಯತೆ ಮಾಡಿಕೊಂಡು ಕ್ರಿಯಾ ಯೋಜನೆಯಲ್ಲಿ ಅಳವಡಿಸಿದ ನಂತರ ನಿಯಮಾನುಸಾರ ಮುಂದಿನ ಕ್ರಮವಹಿಸುವುದು.

ಈ) ಈ ಯೋಜನೆಯ ಅನುಷ್ಠಾನ ಮತ್ತು ಅನುದಾನ ವಿನಿಯೋಗದಲ್ಲಿ ಅನುಮೋದಿತ ಟೆಂಡರ್ ಮೊತ್ತ ಮೀರಿ ಹೆಚ್ಚಳವಾಗದಂತೆ ಅನುಷ್ಠಾನ ಅಧಿಕಾರಿಗಳು ನಿಗಾವಹಿಸಿ ಪ್ರಚಲಿತ ನಿಯಮಗಳನುಸಾರ ಅಗತ್ಯವಿರುವ ನಿಬಂಧನೆಗಳನ್ನು ಅಳವಡಿಸಿಕೊಂಡು ಸೂಕ್ತ ರೀತಿಯಲ್ಲಿ ಒಡಂಬಡಿಕೆ – ಕರಾರುಗಳನ್ನು ಮಾಡಿಕೊಳ್ಳತಕ್ಕದ್ದು.

ಉ) ಯಶಸ್ವಿ ಗುತ್ತಿಗೆದಾರರು ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ಪೂರ್ಣಗೊಳಿಸಿ ಕಾರ್ಯಗತಗೊಳಿಸಬೇಕು. ತದನಂತರ **5** ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣ ನಿರ್ವಹಣೆ ಹಾಗೂ ಕಾರ್ಯಾಚರಣೆ ಜವಾಬ್ದಾರಿಯನ್ನು (ವಿದ್ಯುತ್ ಶುಲ್ಕ ಹೊರತುಪಡಿಸಿ) ಸದರಿ ಸಂಸ್ಥೆ ನಿರ್ವಹಿಸತಕ್ಕದ್ದು.

ಊ) ಯೋಜನಾ ವ್ಯಾಪ್ತಿಯ ಜನವಸತಿಗಳಿಗೆ 55 LPCD ನೀರನ್ನು ಒದಗಿಸುವುದು. ಯಾವುದೇ ಕಾರಣಕ್ಕೂ ಅನುಮೋದಿತ ಯೋಜನಾ ಅಂದಾಜು ವೆಚ್ಚದಲ್ಲಿ ಹೆಚ್ಚಳವಾದಲ್ಲಿ ಗುತ್ತಿಗೆದಾರರೇ ಅಂತಹ ಹೆಚ್ಚಳ ಭರಿಸತಕ್ಕದ್ದು.

ಋ)ಗುತ್ತಿಗೆದಾರರು ಸಿದ್ಧಪಡಿಸುವ ಡಿ.ಪಿ.ಆರ್‌ಗೆ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ರವರ ಹಂತದಲ್ಲಿರುವ **DBOT** ತಾಂತ್ರಿಕ ಸಮಿತಿ, ತಾಂತ್ರಿಕ ಸಿಂಧುತ್ವವನ್ನು ಪರಿಶೀಲಿಸಿ ದೃಢೀಕರಿಸಬೇಕು. ಹೀಗೆ ದೃಢೀಕರಿಸುವಾಗ ವಾಸ್ತವಿಕವಾಗಿ ಅಗತ್ಯವಿರುವ ಪ್ರಮಾಣದ ಶುದ್ಧ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆಗೆ ಅಗತ್ಯವಿರುವ ಎಲ್ಲಾ ತಾಂತ್ರಿಕ ವಿನ್ಯಾಸಗಳು ಮತ್ತು ಕಾಮಗಾರಿಗಳು ಪೂರಕವಾಗಿರುವುದನ್ನು ದೃಢಪಡಿಸಿಕೊಳ್ಳಬೇಕು.

ಎ) ಈ ಯೋಜನೆಯ ಕಾಮಗಾರಿಯನ್ನು 15 ತಿಂಗಳ ಕಾಲಮಿತಿಯೊಳಗೆ ಅನುಷ್ಠಾನಗೊಳಿಸತಕ್ಕದ್ದು. ಯಾವುದೇ ವಿಳಂಬಕ್ಕೆ ಅವಕಾಶವೀಯ ಕೂಡದು ಯೋಜನೆಯ ಘಟಕದಲ್ಲಿನ ಸಾಮಗ್ರಿಗಳ ಬೆಲೆ ಹೆಚ್ಚಳಕ್ಕೆ ಅವಕಾಶವಿರುವುದಿಲ್ಲ. ಬಲ್ಕ್‌ವಾಟರ್ ಮೀಟರ್‌ಗಳನ್ನು ಎಲ್ಲಾ ಜನವಸತಿಗಳ OHT ಬಳಿ ಅಳವಡಿಸತಕ್ಕದ್ದು.

ಏ) ಯೋಜನಾ ಅಂದಾಜು ಮೊತ್ತದ ಕನಿಷ್ಠ **10%**ನ್ನು ಯೋಜನೆ ಕಾರ್ಯಗತಗೊಳಿಸಿ ತೃಪ್ತಿಕರ **O&M** ವ್ಯವಸ್ಥೆ ನಿರೂಪಿಸುವ ಕಾರ್ಯಕ್ಷಮತೆ ಆಧರಿಸಿ ನಂತರ ಗುತ್ತಿಗೆದಾರರಿಗೆ ಪಾವತಿಸಬೇಕು.

ಐ) ಈ ಯೋಜನೆಯ ಮುಖ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ನಂತರ, ಅವುಗಳ ಗುಣಮಟ್ಟ ಮತ್ತು ಕಾರ್ಯಕ್ಷಮತೆ ಮತ್ತು **PMC** ವರದಿ ಆಧರಿಸಿ ಅನುಮೋದಿತ **ToR** ಹಾಗೂ ಟೆಂಡರ್ ಕರಾರಿನಂತೆ ನಿಯಮಾನುಸಾರ ಬಿಲ್ ಪಾವತಿಸಲು ಅನುಷ್ಠಾನಾಧಿಕಾರಿಗಳು ಹಾಗೂ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ರವರು ಕ್ರಮವಹಿಸಬೇಕು. ಕಾಮಗಾರಿಯ ಕಾಲಕಾಲಿಕ ಪ್ರಗತಿ ಮತ್ತು ಗುಣಮಟ್ಟ ಪರಿಶೀಲಿಸಿ ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ವರದಿ ಮಾಡತಕ್ಕದ್ದು.

ಒ) ಈ ಯೋಜನೆಯ ವಿನ್ಯಾಸದ ಕಾರ್ಯಸಿಂಧುತ್ವ ಪರಿಶೀಲಿಸುವುದು, ಕಾಲಮಿತಿಯೊಳಗೆ ಯೋಜನೆ ಅನುಷ್ಠಾನಗೊಳಿಸುವುದು ಮತ್ತು ಯೋಜನೆಯ ಕಾಮಗಾರಿಗಳ ಗುಣಮಟ್ಟ ಪರಿವೀಕ್ಷಣೆ ಸಲುವಾಗಿ ಅಗತ್ಯವಿರುವ ಯೋಜನಾ ಉಸ್ತುವಾರಿ ಘಟಕವನ್ನು ಟೆಂಡರ್ ಮುಖೇನ ಗೊತ್ತುಪಡಿಸಿ, ಸರ್ಕಾರದ ಅನುಮೋದನೆ ಪಡೆಯಲು ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಜರೂರಾಗಿ ಕ್ರಮವಹಿಸತಕ್ಕದ್ದು.

ಓ) ಮೇಲ್ಕಂಡ ಅನುಮೋದಿತ ಮೊತ್ತ **DBOT** ತಾಂತ್ರಿಕ ಸಮಿತಿ ದೃಢೀಕರಿಸುವ ಯೋಜನೆಯ ಮುಖ್ಯ ಕಾಮಗಾರಿಗಳ ವಾಸ್ತವಿಕ ಅಂದಾಜು ಮೊತ್ತದ ನಿಬಂಧನೆಗೊಳಪಟ್ಟಿರುತ್ತದೆ. ಅಂತೆಯೇ, ಅನುಮೋದಿತ ಸಂಸ್ಥೆಯೊಡನೆ MoU/ಕರಾರು ಪತ್ರ ಮಾಡಿಕೊಳ್ಳುವ ಮೊದಲು ಗರಿಷ್ಠ ಮಿತವ್ಯಯ ಅಳವಡಿಸಿ, ಸರ್ಕಾರದ ಅನುಮತಿ ಪಡೆದು ಯೋಜನೆಯ ಅನುಷ್ಠಾನ ಕುರಿತು ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ರವರು ಮುಂದಿನ ಕ್ರಮವಹಿಸತಕ್ಕದ್ದು.

3. ಈ ಆದೇಶವನ್ನು **ಆರ್ಥಿಕ ಇಲಾಖೆ ಟಿಪ್ಪಣಿ ಸಂ: ಆಇ 480 ವೆಚ್ಚ-6/2021 ದಿನಾಂಕ:04.10.2021 ಮತ್ತು ನಗರಾಭಿವೃದ್ಧಿ ಇಲಾಖೆ ಟಿಪ್ಪಣಿ ಸಂಖ್ಯೆ:ನಆಇ 40 ಯುಡಬ್ಲ್ಯೂಎಸ್ 2021 ದಿನಾಂಕ:02.11.2021**ರ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ(ಅಭಿವೃದ್ಧಿ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ –AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–I – G&SSA- AUDIT) ಕರ್ನಾಟಕ, ಬೆಂಗಳೂರು.
3. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ದಕ್ಷಿಣ ಕನ್ನಡ.**
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಆಯುಕ್ತರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
9. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು
10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ದಕ್ಷಿಣ ಕನ್ನಡ.**
11. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ ಕಛೇರಿ, **ಮೈಸೂರು.**

12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
14. ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ.&ನೈ.ಇ., ಕಾವೇರಿ ಭವನ, ಬೆಂಗಳೂರು.
15. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, **ಮಂಗಳೂರು.**
16. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ.&.ಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
17. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
18. ಗ್ರಾ.ಅ.ಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
19. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.